SERVICE ABOVE SELF



Rotary

# विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25



| Rtn. CA Dev Anand | Rtn. K. Sooryanarayana Udpa | Rtn. N.G. Usha | Rtn. M. Madhavachar |
|---|---|---|---|
| District Governor 2024-25 | President, Mob: 99009 66114 | Secretary, Mob : 81975 92278 | Bulletin Editor, Mob: 98862 73495 |



We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –40 ದಿನಾಂಕ : 02–04–2025


**ದಿನಾಂಕ: 02.04.2025 ರ ವಾರದ ಸಭೆ ನಡೆಯಿತು. ಅಂದಿನ ಸಭೆಗೆ ಮುಖ್ಯ ಅತಿಥಿಗಳಾಗಿ ವಿಶೇಷ ವರದಿಗಾರರು ಕನ್ನಡ ಪ್ರಭ ದಿನಪತ್ರಿಕೆ, ಬರಹಗಾರರು ಹಾಗೂ ಪತ್ರಕರ್ತರಾದ ಶ್ರೀ ಯಡಗೆರೆ ಗೋಪಾಲ್‌ರವರು ಆಗಮಿಸಿದ್ದು, 'ಸೋಲನ್ನು ಸೋಲಿಸಿ' ಎಂಬ ವಿಷಯದಲ್ಲಿ ಮಾತನಾಡಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳೊಂದಿಗೆ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದರು.**










ಅಂದಿನ ಸಭೆಯಲ್ಲಿ ರೊ.ಗಾಯತ್ರಿ ಸುಮತೀಂದ್ರರವರು "ಕೈಮುಗಿದು ಗಣಪತಿಗೆ ಕಟ್ಟಿರೋ ಗೆಜ್ಜೆ" ಎಂಬ ಹಾಡಿನ ಮೂಲಕ ಪ್ರಾರ್ಥನೆ ಮಾಡಿದರು. ಅಧ್ಯಕ್ಷರಾದ ರೊ. ಕೆ. ಸೂರ್ಯ ನಾರಾಯಣ ಉಡುಪರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವರದಿ ಓದಿದರು. ಅಲ್ಲದೇ ಈ ವಾರದಲ್ಲಿ ತಮ್ಮ ಹುಟ್ಟು ಹಬ್ಬ ಆಚರಿಸಿಕೊಂಡ ರೊ. ವಿ. ಶ್ರೀನಿವಾಸ್ ಮತ್ತು ರೊ. ಅನುರಾಧ ಶೀರನಾಳಿಯವರನ್ನು ವೇದಿಕೆಗೆ ಆಹ್ವಾನಿಸಿದರು, ಅವರುಗಳಿಗೆ ಹುಟ್ಟು ಹಬ್ಬದ ಶುಭಾಶಯ ಕೋರಲಾಯಿತು. ಶರಣ್ಯದಿಂದ ರೋಟರಿ ಕ್ಲಬ್‌ಗೆ ಕೃತಜ್ಞತಾ ಪತ್ರವನ್ನು ರೊ.ಡಿ.ಎಲ್. ಮಂಜುನಾಥರವರು ಅಧ್ಯಕ್ಷರಿಗೆ ನೀಡಿದರು. ಟಿ.ಆರ್.ಎಫ್ ನಿಂದ ಬಂದಿರುವ ಮ್ಯಾಚಿಂಗ್ ಗ್ರಾಂಟ್‌ನ ಚೆಕ್‌ವೊಂದನ್ನು (ಚೆಕ್ ಮೊಬಲಗೂ ರೂ.1,97,001/–ನ್ನು) ರೋಟರಿ ಸೆಂಟಿನರಿ ಫೌಂಡೇಷನ್ ಆಫ್ ಶಿವಮೊಗ್ಗ ರೋಟರಿಯ ಕಾರ್ಯದರ್ಶಿ ರೊ. ಆರ್.ಆನಂದರವರಿಗೆ ಅಧ್ಯಕ್ಷರು ನೀಡಿದರು. ರೊ. ಕೆ. ಚಂದ್ರಪ್ಪನವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಬಿದ್ದಾಗ ಬೆನ್ನು ತೋರಿಸದೆ ಎಂದು ನಿಂತರೆ ಸೋಲನ್ನೇ ಸೋಲಿಸಲು ಸಾಧ್ಯ ಎಂದು ಮುಖ್ಯ ಅತಿಥಿಗಳಾದ ಹಿರಿಯ ಪತ್ರಕರ್ತರಾದ ಶಿವಮೊಗ್ಗ ಶ್ರೀ ಗೋಪಾಲ್ ಯಡಗೆರೆಯವರು ಸೋಲನ್ನು ಸೋಲಿಸಿ ಎಂಬ ವಿಚಾರವಾಗಿ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ಜೀವನದ ಎಲ್ಲಾ ಹಂತಗಳನ್ನು ದಾಟಿದ ಅನುಭವಗಳನ್ನು ಹೊಂದಿರುವ ತಮ್ಮೆಲ್ಲರಿಗೆ ಹೊಸ ಅನುಭವಗಳು ಹೇಳಬೇಕಿರುವುದು ಏನಿಲ್ಲವಾದರೂ ನಮ್ಮ ಮುಂದಿನ ಪೀಳಿಗೆಗೆ ಅದನ್ನು ದಾಟಿಸಿದರೆ ಒಳ್ಳೆಯದು ಎಂದರು. ತಾವು ಬರೆದಿರುವ 'ಸೋಲನ್ನು ಸೋಲಿಸಿ' ಪುಸ್ತಕ ಸೋಲನ್ನು ಸೋಲಿಸುವುದು ಹೇಗೆ ? ಓದಿ, ಜೀವನವಿನ್ನೂ ಇದೆ ಎಂದು ಸಾಧಿಸಿದ ಹಲವಾರು ಓದುಗರು ತಿಳಿಸಿದ್ದಾರೆ. ಕೆಲವರು ಮಕ್ಕಳನ್ನು ಕಳೆದುಕೊಂಡವರು ತಮ್ಮ ಲೇಖನದಿಂದ ತಾನು ಇನ್ನೂ ಬದುಕಬೇಕು ಎಂಬ ಆಸೆಯಾಯಿತು ಎಂದಿದ್ದಾರೆ. ಆಗ ನಾನು ನನ್ನ ಬರಹ ಸಾರ್ಥಕವಾಯಿತು ಎಂದುಕೊಂಡೆ ಎಂದರು. ಹಲವಾರು ಕಥೆಗಳ ಅನುಭವಗಳ ಗುಚ್ಛ 'ಸೋಲನ್ನು ಸೋಲಿಸಿ' ಲೇಖನ ಎಂದರು.

ಜೀವನದಲ್ಲಿ ಉದ್ಯೋಗ ನಷ್ಟ, ವ್ಯವಹಾರ ನಷ್ಟ, ಎಸ್.ಎಸ್.ಎಲ್.ಸಿ. ಅಥವಾ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣತೆ, ರೈತನಿಗೆ ಬೆಳೆನಾಶದಂತಹ ಅವಘಡಗಳು ಸಂಭವಿಸಿದಾಗ ಆ ಸೋಲನ್ನು ಈಜಿ

## ಈ ವಾರ

**ದಿನಾಂಕ: 09–04–2025, ಬುಧವಾರ ಸಂಜೆ 6:45 ರಿಂದ**

## CLASSIFICATION TALK

**Chef Guest: Rtn. T.K. Mahabaleshwar Bhat**

**Topic : LIFE INSURANCE**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ



















ಗಟ್ಟಿಯಾಗುವುದು ಹೇಗೆ? ನಾನು ಎದ್ದು ನಿಂತು ಗೆಲ್ಲುವುದು ಹೇಗೆ? ಎಂಬ ಕಥೆಗಳ ಗುಚ್ಚವೇ 'ಸೋಲನ್ನು ಸೋಲಿಸಿ' ಲೇಖನ ಎಂದರು.

ಯಾವುದೇ ಕ್ಷೇತ್ರವಿರಬಹುದು, ಒಮ್ಮೊಮ್ಮೆ ಸೋಲು ಧುತ್ತೆಂದು ಎದುರಾಗುತ್ತದೆ. ಆಗ ಅದಕ್ಕೆ ಬೆನ್ನು ತೋರಿಸಿ ಓಡದೆ ಗಟ್ಟಿಯಾಗಿ ಎದುರಿಸಿ ಸೋಲನ್ನು ಸೋಲಿಸಿ ಗೆಲುವನ್ನು ನಮ್ಮದಾಗಿಸಿಕೊಳ್ಳಬೇಕು. ಅದೇ ರೀತಿ ಸೋತವರ ಜೊತೆ ನಾವಿದ್ದೀವಿ ಎಂಬ ಭರವಸೆ ನೀಡುವುದರೊಂದಿಗೆ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವೂ ನಮ್ಮದಾಗಬೇಕು ಎಂದು ಶ್ರೀ ಗೋಪಾಲ್ ಯಡಗೆರೆಯವರು ಅಭಿಪ್ರಾಯ ಪಟ್ಟರು.

ಒಂದು ಸೋಲು ನಮ್ಮನ್ನು ಕಂಗೆಡಿಸಿ ಬಿಡಬಹುದು. ಆದರೆ ಸೋತಾಗ ಎದ್ದು ನಿಲ್ಲುವ ಪ್ರಯತ್ನವೇ ನಮ್ಮನ್ನು ಗೆಲ್ಲಿಸುವ ಹಾದಿಗೆ ತಂದು ನಿಲ್ಲಿಸುತ್ತದೆ. ಇಂಥಹ ಸೋಲಿನ ಸನ್ನಿವೇಶದಲ್ಲಿ ಸೋಲಿಗೆ ಬೆನ್ನು ತೋರಿಸದೆ ಸೋಲನ್ನು ಸೋಲಿಸಿ ಇತಿಹಾಸ ಗೆದ್ದು ಇತಿಹಾಸ ಸೃಷ್ಟಿಸಿದ ಅನೇಕರು ನಮ್ಮ ಎದುರಿಗಿದ್ದಾರೆ. ಹಠ, ಶ್ರಮ, ಬದ್ಧತೆ, ಧೈರ್ಯ, ಗೆಲ್ಲುವ ಛಲ ಇದ್ದರೆ ಒಂದಲ್ಲ ಒಂದು ದಿನ ಗೆಲುವು ನಮ್ಮದಾಗೇ ಆಗುತ್ತದೆ. ಜಗತ್ತಿನಲ್ಲಿ ಇಂತಹ ಸಾವಿರಾರು ಮಂದಿ ಇರಬಹುದು. ಆದರೆ ನಮ್ಮ ಸುತ್ತಮುತ್ತಲೇ ಅನೇಕರಿದ್ದಾರೆ. 'ಅಮೃತ್ ನೋನಿ' ಶ್ರೀನಿವಾಸಮೂರ್ತಿ, 'ಆದಿತ್ಯ ಕನ್‌ಸ್ಟ್ರಕ್ಷನ್' ಕಂಪನಿಯ ಹೆಚ್.ಎಸ್. ಶಿವಶಂಕರ್ ಇವರೆಲ್ಲ ನಮ್ಮೆದುರಿಗಿನ ಉದಾಹರಣೆಗಳು.

ಸೋಲನ್ನು ಸೋಲಿಸುವುದು ಒಂದೆಡೆಯಾದರೆ, ಸೋಲೇ ನಮ್ಮ ಬಳಿ ಸುಳಿಯದಂತೆ ಗೆಲುವಿನ ಗೋಡೆ ಕಟ್ಟುವುದು ಇನ್ನೊಂದು ಆಯಾಮ. ಪ್ರತಿಕ್ಷಣ ಸಮಾಜಕ್ಕಾಗಿ, ನಮ್ಮ ನೆರೆಯವರಿಗಾಗಿ ಎಂದು ಬದುಕುವ ಮೂಲಕ ನಮ್ಮ ಬದುಕಿಗೊಂದು ಸಾರ್ಥಕತೆ ತಂದುಕೊಡಲು ಸಾಧ್ಯ ಎಂದು ಹೇಳಿದರು. ಶಿರಸಿಯ ಗೌರಿ ಎಂಬ ಮಹಿಳೆ ಕುಂಭ ಮೇಳಕ್ಕೆ ಹೋಗಲಾಗಲಿಲ್ಲವೆಂದು ಬೇಸರಿಸಿ ಕುಗ್ಗದೆ, ತಮ್ಮ ಮನೆಯಂಗಳದಲ್ಲಿಯೇ ಏಕಾಂಗಿಯಾಗಿ ಬಾವಿ ತೋಡಿ ಗಂಗೆಯನ್ನೇ ತನ್ನ ಮನೆಯ ಬಾಗಿಲಿಗೆ ತಂದುಕೊಂಡ ಯಶೋಗಾಥೆ. ಇದೇ ಗೌರಿಯವರು ತಮ್ಮ ಊರಿನ ಅಂಗನವಾಡಿ ಮಕ್ಕಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಅಧಿಕಾರಿಗಳು ನೀಡಿದ ಕಿರುಕುಳದ ನಡುವೆಯೂ ಬಾವಿ ತೋಡಿ ನೀರುಣಿಸಿದ ಕತೆ. ಶಿವಮೊಗ್ಗದಲ್ಲಿಯೇ ಇದೇ ಕ್ಲಬ್‌ನ ರೋಟರಿ ಸದಸ್ಯ ಶ್ರೀ ಡಿ.ಎಲ್. ಮಂಜುನಾಥ್ 'ಶರಣ್ಯ' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ ಸಾಹಸ, 'ತಾಯಿ ಮನೆ' ಎಂಬ ಅನಾಥಾಶ್ರಮ ನಡೆಸುತ್ತಿರುವ ಸುದರ್ಶನ್, 'ಮಾತೃಛಾಯ' ಎಂಬ ಅನಾಥಾಶ್ರಮವನ್ನು ಹಲವಾರು ಸವಾಲುಗಳ ನಡುವೆಯೂ ಹಲವು ವರ್ಷ ಮುನ್ನಡೆಸಿದ್ದ ಸಹನಾ ಪ್ರಭು ಇವರೆಲ್ಲಾ ನಮ್ಮ ನಡುವಿನ ಸಾಧಕರು. ಇವರುಗಳೆಲ್ಲಾ ನಮಗೆ ಆದರ್ಶವಾಗಬೇಕೆಂದರು.

ಸೋತಾಗ ಮಕ್ಕಳಿಗೆ ಗೆಲುವಿನ ಮತ್ತು ಸುತ್ತಮುತ್ತಲಿನವರ ಆಸರೆ ಬೇಕು. ಹೋಗು ಮತ್ತೊಮ್ಮೆ ಪ್ರಯತ್ನಿಸು ಎಂಬ ಗೆಲುವಿನ ಆತ್ಮವಿಶ್ವಾಸ ತುಂಬುವ ಕೆಲಸವಾಗಬೇಕು. ಮಕ್ಕಳಿಗೆ ಹೊಸ ಬದುಕನ್ನು ಕೊಡುವುದೇ ದೊಡ್ಡ ಕಾರ್ಯ. ಬರುವ ಸೋಲಿಗೆ ದೊಡ್ಡ ಗೆಲುವಿನ ಕಟ್ಟೆ ಕಟ್ಟಬೇಕು. ಹತಾಷೆಯಿಂದ ಸೋಲಬಾರದು, ಕೊರಗಬಾರದು ಎಂದು ಮಕ್ಕಳಿಗೆ ಇತರರಿಗೆ ಮಾದರಿಯಾಗಿ ಜೀವನದ ಸಾರ್ಥಕತೆ ಪಡೆಯೋಣ ಎಂದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಇಂದು ಮುಖ್ಯ ಅತಿಥಿಗಳಾದ ಶ್ರೀ ಯಡಗೆರೆ ಗೋಪಾಲ್‌ರವರು ಸೋಲನ್ನು ಹೇಗೆ ಗೆಲುವಾಗಿ ಪರಿವರ್ತಿಸಿಕೊಳ್ಳಬೇಕು ಎಂಬುದರ ಬಗ್ಗೆ ಮಾತನಾಡಿದ್ದಾರೆ. ಅವರಿಗೆ ಕೃತಜ್ಞತೆಗಳು ಎಂದರು. ಅಂದು ವೇದಿಕೆಯಲ್ಲಿ ಶ್ರೀ ಗೋಪಾಲ್ ಯಡಗೆರೆ ಹಾಗೂ ಶ್ರೀಮತಿ ಲತಾ ಯಡಗೆರೆಯವರನ್ನು ರೊ.ಡಿ.ಎಲ್. ಮಂಜುನಾಥ್, ರೊ.ಬಿ.ಎನ್. ಸತ್ಯನಾರಾಯಣ, ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸೇರಿ ಸನ್ಮಾನಿಸಿದರು.

ಕೊನೆಯಲ್ಲಿ ರೊ.ಎನ್.ಜಿ. ಉಷಾರವರಿಂದ ವಂದನಾ ರ್ಪಣೆಯಾಯಿತು. ರಾಷ್ಟ್ರಗೀತೆಯ ನಂತರ ರೊ.ವೈ.ವಿ.ವೆಂಕಟರಮಣ ಜೋಯ್ಸ್‌ರವರ ಭಾರತ್ ಮಾತಾ ಕೀ ಜೈಉದ್ಘೋಷದ ನಂತರ ಸಭೆ ಸಂಪನ್ನವಾಯಿತು.

**ಯುಗಾದಿ ಹಬ್ಬದ ಸಂಧರ್ಭದಲ್ಲಿ – ಹಿಂದೂ ಪಂಚಾಂಗದ ರೀತ್ಯಾ ಶಕೆ ವರ್ಷಗಳ ಸಂಕಲ್ಪಗಳ ಕಾಲಮಾನಗಳ ವಿವರ ರೊ.ಟಿ.ಕೆ.ಮಹಾಬಲೇಶ್ವರ ಭಟ್‌ರವರಿಂದ ಲೇಖನ :**

## ಶಾಲಿವಾಹನ ಶಕ


ಓಂ ನಮಃ ಶಿವಾಭ್ಯಾಂ ಶೋಭನೇ ಮುಹೂರ್ತೆ ಅದ್ಯ ಬ್ರಾಹ್ಮಣ ದ್ವಿತೀಯ ಪಾರಾರ್ದೆ, ಶ್ವೇತವರಾಹಕಲ್ಪೆ ವೈವಸ್ವತ ಮನ್ವಂತರೇ, ಕಲಿಯುಗೆ, ಪ್ರಥಮ ಪಾದೇ, ಭರತ ವರ್ಷೇ, ಭರತ ಖಂಡೇ, ಜಂಬೂದ್ವೀಪೇ, ದಂಡಕಾರಣ್ಯೆ, ದೇಶೆ ಗೋದಾವರ್ಯಾ: , ದಕ್ಷಿಣೆತೀರೇ, ಶಾಲಿವಾಹನ ಶಕೆ, ಬೌದ್ಧಾವತಾರೇ ರಾಮಕ್ಷೇತ್ರೆ, ಅಸ್ಮಿನ್ ವರ್ತಮಾನೆ, ವ್ಯಾವಹಾರಿಕೆ, ಶ್ರೀಮತ್ ವಿಶ್ವಾವಸು ನಾಮ ಸಂವತ್ಸರೇ, ಉತ್ತರಾಯಣೇ, ವಸಂತ ಋತು, ಚೈತ್ರಮಾಸ ಶುಕ್ಲ ಪಕ್ಷ ದ್ವಿತಿಯಾಂಥಿತೌ ...

ಈ ಶ್ವೇತವರಾಹ ಕಲ್ಪದಲ್ಲಿ ಸ್ವಾಯಂಭು, ಸ್ವಾಹೋಚಿಷ, ಉತ್ತಮ, ತಾಮಸ, ರೈವಸ, ಚಾಕ್ಷುಷವೆಂಬ ಆರು ಮನ್ವಂತರಗಳು ಕಳೆದು, ಏಳನೇ ಈ ವೈವಸ್ವತ ಮನ್ವಂತರದಲ್ಲಿ 27 ಚತುರ್ಯುಗಗಳು ಕಳೆದು 28 ನೇ ಚತುರ್ಯುಗದಲ್ಲಿ ಕೃತ, ಶ್ವೇತಾ, ದ್ವಾಪರಗಳೆಂಬ 3 ಯುಗಗಳು ಕಳೆದು, 4 ನೇ ಈ ಕಲಿಯುಗದಲ್ಲಿ 5126 ವರ್ಷಗಳು ಮುಗಿದಿವೆ. ಈ ಯುಗದಲ್ಲಿ ಯುದಿಷ್ಠಿರ ಮತ್ತು ವಿಕ್ರಮ ಎಂಬ ಎರಡು ಶಕೆಗಳು ಕಳೆದು 3 ನೇ ಈ ಶಾಲಿವಾಹನ ಶಕದಲ್ಲಿ 1947 ವರ್ಷಗಳು ಕಳೆದು 1948 ನೇ ವಿಶ್ವಾವಸು ನಾಮ ಸಂವತ್ಸರದಲ್ಲಿದ್ದೇವೆ.

ಕ್ರಿ. ಪೂ.3101 ನೇ ಇಸವಿಯಲ್ಲಿ ಈ ಕಲಿಯುಗ ಪ್ರಾರಂಭವಾಗಿದೆ. 3101 ವರ್ಷ ಶ್ರೀ ಕೃಷ್ಣ ಅವತಾರ ಸಮಾಪ್ತಿ.

| | |
|---|---|
| **ಕಲಿಯುಗ** | **– 4,32,000 ವರ್ಷಗಳು** |
| **ದ್ವಾಪರಯುಗ** | **– 8,64,000 ವರ್ಷಗಳು** |
| **ತ್ರೇತಾಯುಗ** | **– 12,96,000 ವರ್ಷಗಳು** |
| **ಕೃತಯುಗ** | **– 17,28,000ವರ್ಷಗಳು** |

ಈ ಎಲ್ಲಾ ಯುಗಗಳು ಸೇರಿ ಒಂದು ಚತುರ್ಯುಗ,
ಅಂದರೆ 43,20,000 ವರ್ಷಗಳು
13,20,000X 1000 ವರ್ಷಗಳು ಸೇರಿದರೆ
ಬ್ರಹ್ಮನಿಗೆ ಒಂದು ಹಗಲು
43,20,000X 2000 ವರ್ಷಗಳು ಸೇರಿದರೆ
ಬ್ರಹ್ಮನಿಗೆಒಂದು ದಿವಸ
2,000 ಚತುರ್ಯುಗ X 365 ದಿನ X 100 ವರ್ಷಗಳು
ಸೇರಿದರೆ ಬ್ರಹ್ಮನ ಆಯಸ್ಸು




1000 ಚತುರ್ಯುಗಕ್ಕೆ ಒಂದು ಕಲ್ಪ.ಈಗ ಶ್ವೇತ ವರಾಹ ಕಲ್ಪ. 14 ಮನು ಇದರ ನಿರ್ವಹಣೆ ಮಾಡುತ್ತಿದ್ದಾರೆ. ಒಬ್ಬ ಮನುವಿಗೆ 71.42 ಚತುರ್ಯುಗಗಳು. ಈಗ ಇರುವುದು 7 ನೇ ಮನು, ಈ ಮನು ಸೂರ್ಯ, ಸೂರ್ಯನಿಗೆ ವಿವಸ್ವಾನ್, ವೈವಸ್ವತ, ಮನ್ವಂತರೇ 20ನೇ ಚತುರ್ಯುಗದಲ್ಲಿದ್ದೇವೆ. ಅದರಲ್ಲಿ ಕಲಿಯುಗದಲ್ಲಿದ್ದೇವೆ. ಕಲಿಯುಗಕ್ಕೆ 4 ನೇ ಪಾದ. 1,08,000 ವರ್ಷಕ್ಕೆ ಒಂದು ಪಾದ. ಕಲಿಯುಗದ 4 ಪಾದದಲ್ಲಿ ನಾವು ಪ್ರಥಮ ಪಾದದಲ್ಲಿದ್ದೇವೆ.

Rotary THE MAGIC OF ROTARY

ಅಂತರಾಷ್ಟ್ರೀಯ ರೋಟರಿ ಜಿಲ್ಲೆ 3182

Rotary Coffeeland, Chikkamagaluru
Zone 07

Dist. SEMINAR ON PRESERVE PLANET EARTH - 2025





Stephanie-Urchick
R.I.President


PHF Rtn.C.A Devanand
District Governor


PHF Rtn.Nasir Hussain
Assistant Governor , Zone 07

Date
27-04-2025, Sunday

Time
9 a.m.

Venue
Honey Dewwz Resort,
Thogarihankal, Chikkamagaluru

Scan for Location




ಈ ಕಾಲಘಟ್ಟದಲ್ಲಿ ಪಶ್ಚಿಮ ಘಟ್ಟಗಳ ಮೂಲ ಭಾಗವಾಗಿರುವ ಚಿಕ್ಕಮಗಳೂರು ಜಿಲ್ಲೆಯ ರೋಟರಿ ವಲಯ 7ರ, (ರೋಟರಿ ಅಂತರ್ರಾಷ್ಟ್ರೀಯ ಜಿಲ್ಲೆ 3182) ಪ್ರತಿಷ್ಠಿತ "ಭೂಸಿರಿ" ವಿಚಾರ ಘೋಷ್ಠಿಯನ್ನು ಸಂಯೋಜಿಸಲು ರೋಟರಿ ಕಾಫಿಲ್ಯಾಂಡ್, ಚಿಕ್ಕಮಗಳೂರು ಕ್ಲಬ್ಬಿಗೆ ನೀಡಿರುವುದು ನಮ್ಮ ಸೌಭಾಗ್ಯವಾಗಿದ್ದು ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ವಿಚಾರ ಘೋಷ್ಠಿಯನ್ನು ಯಶಸ್ವಿಗೊಳಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ

ಈ ಮನವಿಯೊಂದಿಗೆ ನೋಂದಣಿ ಪತ್ರ ಲಗತ್ತಿಸಿದೆ. ದಯವಿಟ್ಟು ಗಮನಿಸಿ, ತಕ್ಷಣ ಸ್ಪಂದಿಸಿ, ಸಹಕರಿಸಿ

PHF Rtn.Nasir Hussain
Assistant Governor, Zone 07
Mob : 9445556336

Rtn.Prasanna Kumar
District Chairman
Preserve Planet Earth
Mob : 9481579950

Rtn.Ravindranath Naidu C J
Bhoosiri Chairman
Mob : 9844233968

Rtn.Anand M
Bhoosiri Vice Chairman
Mob : 9663477102

Rtn.Tanoj Kumar P
President
Mob : 9900143129

Rtn.Nagesh Kenjige
Secretary
Mob : 9844002370





## ಸಂಪಾದಕೀಯ

### ದೇಶದ ಕುರಿತಾದ ನಿಜವಾದ ಕಾಳಜಿ

ವಿಸ್ತೀರ್ಣದಲ್ಲಿ ಸುಮಾರು ನಮ್ಮ ದೇಶದ ಮಹಾರಾಷ್ಟ್ರ ರಾಜ್ಯದಷ್ಟು ಮಾತ್ರ ದೊಡ್ಡದಿರುವ ಪುಟಾಣಿ ದ್ವೀಪ ದೇಶ ಜಪಾನ್; ಸಂಪನ್ಮೂಲಗಳ ಸದ್ಬಳಕೆ, ಪ್ರಜೆಗಳ ಪ್ರಾಮಾಣಿಕತೆ, ದೇಶ ಪ್ರೇಮ, ಕಾಯಕ ಪ್ರಜ್ಞೆ ಮೂಲಕ ವಿಶೇಷ ಪ್ರಗತಿ ಸಾಧಿಸಿ, ಅಭಿವೃದ್ಧಿಯ ವಿಚಾರದಲ್ಲಿ ಹಲವು ದೇಶಗಳಿಗಿಂತ ಬಹಳ ಮುಂದಿದೆ. ಇದಕ್ಕೆ ಮುಖ್ಯ ಕಾರಣ, ಅಲ್ಲಿನ ನಾಗರಿಕರಿಗೆ ತಮ್ಮ ದೇಶದ ಕುರಿತಾಗಿ ಇರುವ ನಿಸ್ವಾರ್ಥ ಕಾಳಜಿ ಹಾಗೂ ಕಳಕಳ. 1945ರಲ್ಲಿ ನಡೆದ ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ ನಡೆದ ಅತ್ಯಂತ ಭೀಕರ ಬಾಂಬ್ ದಾಳಿಯಿಂದ ಸಂಪೂರ್ಣ ನಾಶವಾಗಿದ್ದ ಹಿರೋಶಿಮಾ, ನಾಗಸಾಕಿ ನಗರಗಳನ್ನು ಕೆಲವೇ ವರ್ಷಗಳಲ್ಲಿ ಮರು ನಿರ್ಮಾಣ ಮಾಡಿ, ಮಾದರಿಯಾದವರು ಜಪಾನೀಯರು, ಈ ಜಪಾನೀಯರಿಗೆ ತಮ್ಮ ದೇಶದ ಬಗೆಗಿರುವ ವಿಶಿಷ್ಟ ಕಾಳಜಿಯ ಕುರಿತು ಹಲವಾರು ಕಥೆಗಳಿವೆ.

ಸಾಮಾನ್ಯವಾಗಿ ನಮ್ಮಲ್ಲಿ ಮುಷ್ಕರವೆಂದರೆ ಕಾರ್ಖಾನೆಯ ಲಾಕ್‌ಡೌನ್, ಎಲ್ಲವನ್ನೂ ಬಲಾತ್ಕಾರವಾಗಿ ಬಂದ್ ಮಾಡಿಸುವುದು, ಸಾರ್ವಜನಿಕ ಆಸ್ತಿಪಾಸ್ತಿಗಳ ನಾಶ, ಟೈರಿಗೆ ಬೆಂಕಿ ಹಚ್ಚಿ ರಸ್ತೆ ತಡೆ ಮಾಡುವುದು, ದುಷ್ಕರ್ಮಿಗಳಿಂದ ದೊಂಬಿ, ಕಲ್ಲು ತೂರಾಟ ಇತ್ಯಾದಿಗಳು ಸರ್ವೇ ಸಾಮಾನ್ಯ. ಆದರೆ ತಾವು ಮಾಡುವ ಕಾಯಕ, ದೇಶದ ಪ್ರಗತಿಗೆ ಅತ್ಯಂತ ಅವಶ್ಯಕ ಹಾಗೂ ತಮ್ಮ ಮುಷ್ಕರದಿಂದ ದೇಶದ ಪ್ರಗತಿ ಕುಂಠಿತವಾಗಬಾರದೆಂದು ದೃಢವಾಗಿ ನಂಬಿದ್ದ ಜಪಾನಿನ ಈ ಚಪ್ಪಲ ಕಾರ್ಖಾನೆಯ ಕಾರ್ಮಿಕರು ಮುಷ್ಕರವನ್ನು ಹೇಗೆ ಮಾಡಿದರು ಗೊತ್ತೇ?

ತಮ್ಮ ಕೆಲಸಕ್ಕೆ ಎಂದೂ ರಜೆ ಹಾಕದೇ, ಕಾರ್ಖಾನೆಯ ಉತ್ಪಾದನೆಗೆ ಕೊಂಚವೂ ತಡೆಯಾಗದಂತೆ ತಮ್ಮ ಬೇಡಿಕೆಗಳನ್ನು ಇವರು ಈಡೇರಿಸಿಕೊಂಡ ವಿಧಾನ ಅತ್ಯಂತ ವಿಶಿಷ್ಟವಾಗಿದೆ. ಮುಷ್ಕರ ನಿರತ ಈ ಕಾರ್ಖಾನೆಯ ಕಾರ್ಮಿಕರು, ಬರೀ ಎಡಗಾಲಿನ ಚಪ್ಪಲಿಯನ್ನು ಮಾತ್ರ ಉತ್ಪಾದನೆ ಮಾಡತೊಡಗಿದರು. ತಮ್ಮ ಬೇಡಿಕೆ ಈಡೇರುವ ತನಕ ಬಲಗಾಲಿನ ಚಪ್ಪಲಿಗಳನ್ನು ಉತ್ಪಾದಿಸುವುದಿಲ್ಲ ಎಂಬುದು ಅವರ ದೃಢ ನಿಲುವಾಗಿತ್ತು. ಕೇವಲ ಎಡಗಾಲಿನ ಚಪ್ಪಲಿಯನ್ನು ಮಾತ್ರ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಅಸಾಧ್ಯವೆಂದರಿತ ಕಾರ್ಖಾನೆಯ ಮಾಲೀಕರಿಗೆ, ಕಾರ್ಮಿಕರ ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಈಡೇರಿಸದೆ ಬೇರೆ ದಾರಿಯಿರಲಿಲ್ಲ.


ಒಂದು ನಿಮಿಷದ ಕೆಲಸವನ್ನೂ ವ್ಯರ್ಥ ಮಾಡದೇ ಸಾರ್ವಜನಿಕ ಆಸ್ತಿಗಳಿಗೆ ಯಾವುದೇ ಹಾನಿಯುಂಟುಮಾಡದೇ, ತಮ್ಮ ಕಾಯಕದ ಮೂಲಕವೇ ಪ್ರತಿಭಟನೆ ಮಾಡಿ ಬೇಡಿಕೆಗಳನ್ನು ಈಡೇರಿಸಿಕೊಂಡ ಜಪಾನೀಯರ ಈ ವಿಧಾನ ಮಾದರಿಯಲ್ಲವೇ? ದೇಶದ ಕುರಿತಾದ ನಿಜವಾದ ಕಳಕಳಿಗೆ ಇದು ಬಹಳ ದೊಡ್ಡ ಉದಾಹರಣೆ. ತಮ್ಮ ಕಾಯಕ ಯಾವುದೇ ಇರಲಿ, ಅದನ್ನು ಅತ್ಯಂತ ನಿಷ್ಠೆಯಿಂದ ಮಾಡಬೇಕೆಂದು ಪ್ರತಿಯೊಬ್ಬ ಪ್ರಜೆಯೂ ಆಲೋಚಿಸಿದಾಗ ಮಾತ್ರ ಯಾವುದೇ ದೇಶ ಜಪಾನ್ ಮಾದರಿಯಲ್ಲಿ ಬೆಳವಣಿಗೆ ಹೊಂದಲು ಸಾಧ್ಯ.

**ರೊ. ಎಂ. ಮಾಧವಾಚಾರ್**

**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**





### ಒಂದು ಸಣ್ಣ ಕಥೆ...

ಒಂದು ಊರಲ್ಲಿ ಒಬ್ಬ ಜ್ಞಾನಿ ಇದ್ದ. ಅವನು ಒಂದು ಮನೆ ಕಟ್ಟಿ ಸಾಲ ಮಾಡಿಕೊಂಡಿದ್ದ. ಇನ್ನೇನು ಗೃಹಪ್ರವೇಶ ಮಾಡುವಷ್ಟರಲ್ಲಿ ಜೋರಾಗಿ ಮಳೆ ಬಂದು ಮನೆ ಬಿದ್ದು ಹೋಯಿತು. ಆಗ ಎಲ್ಲರೂ ಅಯ್ಯೋ ಪಾಪ ಅನ್ನುತ್ತಿದ್ದಾಗ ಅವನು ಅವರಿಗೆಲ್ಲರಿಗೂ ಸಿಹಿ ಹಂಚೋಕೆ ಬಂದ. ಆಗ ಎಲ್ಲರೂ ಮರುಕದಿಂದ ಕೇಳಿದರು, ನಿನಗೆ ಹುಚ್ಚು ಹಿಡಿದಿದೆಯಾ ಎಂದು. ಆಗ ಆ ಜ್ಞಾನಿ, 'ಭಗವಂತ ಕರುಣಾಮಯಿ. ಗೃಹಪ್ರವೇಶದ ಮೊದಲೇ ಮನೆ ಕೆಡವಿದ. ಆಮೇಲೆ ಬಿದ್ದಿದ್ದರೆ ನಾವೆಲ್ಲಾ ಸಾಯುತ್ತಿದ್ದೆವು ಎಂದು.

ಅರ್ಥ: **Finding Positive In negative Actions.**

### ಚಿಂತನ

**ಹಂಚಿದಷ್ಟು ಜಾಸ್ತಿ ಆಗೋ ಆಸ್ತಿ ವಿದ್ಯೆ**
**ನಂಬಿದಷ್ಟು ಜಾಸ್ತಿ ಆಗೋ ಆಸ್ತಿ ಪ್ರೀತಿ**
**ಸಂತೋಷದಿಂದ ಇದ್ದಷ್ಟು ಜಾಸ್ತಿ ಆಗೋ ಆಸ್ತಿ ಆಯಸ್ಸು**
**ಖುಷಿ ಹಂಚೋಣ, ನಕ್ಕು ಹಗುರಾಗೋಣ.**



– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*